4. 292 ಈಜಿ ಬಿಲ್ ಔಟ್‌ಲೆಟ್‌ಗಳ ಮೂಲಕ.
5. ಎಲೆಕ್ಟ್ರಾನಿಕ್ ಕ್ಲಿಯರೆನ್ಸ್ ವ್ಯವಸ್ಥೆ(ಇ.ಸಿ.ಎಸ್) ಮೂಲಕ.
6. ಬಿಲ್ ಡೆಸ್ಕ್ ಮತ್ತು ಬಿಲ್ ಜಂಕ್ಷನ್‌ಗಳ ಮೂಲಕ.
7. ಭಾರತೀಯ ಸ್ಟೇಟ್‌ಬ್ಯಾಂಕ್‌ಗಳ ಮತ್ತು ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು ಡೆಬಿಟ್ ಕಾರ್ಡ್ ಹೊಂದಿರುವ ವಿದ್ಯುತ್ ಗ್ರಾಹಕರು ಎ.ಟಿ.ಎಂ.ಗಳ ಮೂಲಕ ವಿದ್ಯುತ್ ಬಿಲ್ ಪಾವತಿಸಬಹುದಾಗಿರುತ್ತದೆ.

1370 (537) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಪರಪ್ಪನ ಅಗ್ರಹಾರದಲ್ಲಿರುವ ಖೈದಿಗಳು ಹಾಗೂ ವಿಚಾರಣಾಧೀನ ಖೈದಿಗಳ ಸಂಖ್ಯೆ ಎಷ್ಟು;

ಆ) ಈ ಕಾರಾಗೃಹದಲ್ಲಿರುವ ಹೆಚ್ಚಿನ ಖೈದಿಗಳು ಮಾನಸಿಕ ಒತ್ತಡಕ್ಕೆ ಒಳಗಾಗಿರುವ ಹಿನ್ನಲೆಯಲ್ಲಿ, ಅವಶ್ಯಕ ಸಂಖ್ಯೆಯಲ್ಲಿ ಮನೋವೈದ್ಯರನ್ನು ನೇಮಿಸಲಾಗಿದೆಯೇ;

ಇ) ಖೈದಿಗಳ ಮಾನಸಿಕ ಪರಿವರ್ತನೆ ಮಾಡಿ ಅವರಿಗೆ ಮಾನಸಿಕ ಖಾಯಿಲೆಗೆ ಚಿಕಿತ್ಸೆ ನೀಡಲು ಈಗ ಈ ಕಾರಾಗೃಹದಲ್ಲಿರತಕ್ಕ ಮನೋವೈದ್ಯರ ಸಂಖ್ಯೆ ಎಷ್ಟು?

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು, ನ್ಯಾಯ, ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) 1476 ಶಿಕ್ಷೆಗೆ ಒಳಗಾದ ಖೈದಿಗಳು ಹಾಗೂ 3574 ವಿಚಾರಣಾಧೀನ ಖೈದಿಗಳು ಒಟ್ಟು 5050 ಇರುತ್ತಾರೆ.

ಆ) ಹೌದು.

ಇ) ಒಂದು.

1372 (1075) ಡಾ: ಸುಧಾಕರ್ ಎಂ.ಸಿ.(ಚಿಂತಾಮಣಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದುವರೆವಿಗೂ ಎಷ್ಟು ಪರವಾನಗಿಯನ್ನು ನೀಡಲಾಗಿದೆ;

ಇ) ತಪ್ಪು ಮಾಹಿತಿಯನ್ನು ನೀಡಿ ಪರವಾನಗಿಯನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ರೀತಿ ಪರವಾನಗಿಯನ್ನು ಪಡೆದಿರುವವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಉ) ಕಲ್ಲುಗಣಿಗಾರಿಕೆ ಬಗ್ಗೆ ರೈತರ ವಿರೋಧ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ರೈತರ ಹಿತಾಸಕ್ತಿ ಕಾಪಾಡುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇದುವರೆಗೆ ಚಿಂತಾಮಣಿ ತಾಲ್ಲೂಕಿನಲ್ಲಿ ಈ ಕೆಳಕಂಡಂತೆ 11 ಗಣಿ ಗುತ್ತಿಗೆಗಳನ್ನು ನೀಡಲಾಗಿದೆ.

ಕ್ವಾರ್ಟ್ಜ್ ಖನಿಜಕ್ಕಾಗಿ	01
ಗ್ರಾನೈಟ್ ಖನಿಜಕ್ಕಾಗಿ	04
ಕಟ್ಟಡದ ಕಲ್ಲುಗುತ್ತಿಗೆಗಾಗಿ	06
ಒಟ್ಟು	11

ಇ) ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಕಲ್ಲುಗಣಿಗಾರಿಕೆ ಬಗ್ಗೆ ರೈತರ ವಿರೋಧ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದರೆ, ಮಡಬಳ್ಳಿ ಗ್ರಾಮದಲ್ಲಿ ಕ್ರಷರ್ ಯಂತ್ರ ಅಳವಡಿಕೆಗೆ ರೈತರ ವಿರೋಧ ವ್ಯಕ್ತವಾಗಿತ್ತು.

ಊ) ಸರ್ಕಾರವು ಕಲ್ಲುಗಣಿಗಾರಿಕೆಗೆ ಪರವಾನಗಿ ನೀಡುವಾಗ ಕಂದಾಯ ಇಲಾಖೆಯ ನಿರಾಕ್ಷೇಪಣೆ ಪತ್ರವನ್ನು ಪಡೆದು ಗುತ್ತಿಗೆಯನ್ನು ಜಾರಿ ಮಾಡಲಾಗುತ್ತಿದೆ. ಇಲಾಖೆಯಿಂದ ಗುತ್ತಿಗೆ ಜಾರಿ ಮಾಡುವಾಗ ರೈತರ

ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟು, ಸ್ಥಳಪರಿಶೀಲನೆ ಮಾಡಿ, ಗಣಿ ಗುತ್ತಿಗೆಯಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ, ರೈಲ್ವೆ ಹಳಿ ಹಾದು ಹೋಗಿರುವ ಮಾರ್ಗದಿಂದ, ಜಲಾಶಯ, ಕೆರೆಏರಿ ಪ್ರದೇಶ, ಕಾಲುವೆಗಳು ಇನ್ನಿತರ ಸಾರ್ವಜನಿಕ ಸ್ಥಳಗಳಿಂದ 50 ಮೀಟರ್ ಅಂತರದಲ್ಲಿ ಗಣಿ ಗುತ್ತಿಗೆ ಪ್ರದೇಶವಿದ್ದಲ್ಲಿ, ಸ್ಫೋಟಕ ರಹಿತವಾಗಿ (No Blasting), 200 ಮೀಟರ್ ದೂರವಿದ್ದಲ್ಲಿ ಸ್ಫೋಟಕಕ್ಕೆ ಅನುಮತಿಯೊಂದಿಗೆ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗುತ್ತದೆ. ಅಲ್ಲದೆ ಗುತ್ತಿಗೆ ಕರಾರು ಒಪ್ಪಂದದಲ್ಲಿ ರೈತರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ನೆರೆಹೊರೆಯಲ್ಲಿ ಬೆಳೆ ಬೆಳೆಯುವ ಪ್ರದೇಶವಿದ್ದಲ್ಲಿ ಅವರಿಗೆ ತೊಂದರೆಯಾಗದಂತೆ ಗಣಿಗಾರಿಕೆ ನಡೆಸಲು ಷರತ್ತು ವಿಧಿಸಲಾಗುತ್ತದೆ.

ಶಾದಿಮಹಲ್‌ಗಳಿಗೆ ಅನುದಾನ

1373 (1627) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಶಾದಿಮಹಲ್‌ಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ; (ಜಿಲ್ಲಾವಾರು ವಿವರ ನೀಡುವುದು)

ಆ) ಯಾವ ಯಾವ ಧರ್ಮೀಯರಿಗೆ ಎಷ್ಟು ಎಷ್ಟು ಅನುದಾನ ಬಿಡುಗಡೆ ಮಾಡಿದೆ; (ಪ್ರತಿಯೊಂದು ಶಾದಿಮಹಲ್‌ಗಳ ಹೆಸರು ಮತ್ತು ಅನುದಾನದ ವಿವರವನ್ನು ಜಿಲ್ಲಾವಾರು ನೀಡುವುದು);

ಇ) ಉಡುಪಿ ಜಿಲ್ಲೆಯಲ್ಲಿ ಶಾದಿಮಹಲ್‌ಗಳ ನಿರ್ಮಾಣಕ್ಕೆ ಯಾವ ಯಾವ ಪ್ರಸ್ತಾವನೆಗಳು ಅನುದಾನ ಕೋರಿ ಸರ್ಕಾರಕ್ಕೆ ಬಂದಿವೆ;

ಈ) ಉಡುಪಿ ಜಿಲ್ಲೆಯ ಶಾದಿಮಹಲ್‌ಗಳಿಗೆ ಯಾವಾಗ ಹಣ ಬಿಡುಗಡೆ ಮಾಡಲಾಗುವುದು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕಳೆದ ಮೂರು ವರ್ಷಗಳಿಂದ ಒಟ್ಟು ರೂ.923.85 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಆ) ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ.